ಕುಮಾರ ಚಲವಾದಿ, ಹಾಸನ
ಪ್ರಾಣಿಗಳಿಗೂ, ಮನುಷ್ಯರಿಗೂ ಇರುವ ಸಾಮ್ಯತೆಯೇನು?



ಸಿಂಹಿಣಿ ಹೇಳಿದಂತೆಯೇ ಸಿಂಹ ಕೇಳುವುದು.

ವಿ. ಹೇಮಂತಕುಮಾರ್, ಬೆಂಗಳೂರು
ಭೀಮನ ಅಮಾವಾಸ್ಯೆಯನ್ನು ವಿಶ್ವ ಗಂಡಂದಿರ ದಿನಾಚರಣೆಯಾಗಿ ಆಚರಿಸಬಹುದಲ್ಲವೆ?
ಊಹೂಂ. ಗಂಡಸರು ವಿಶ್ವ ಗಂಡಾಂತರ ದಿನವಾಗಿ ಆಚರಿಸಬೇಕು ಎಂದನೊಬ್ಬ ಹೆನ್‌ಪೆಕ್ಡು.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಆತ್ಮ+ಹತ್ಯೆ ಇದು ಯಾವ ಸಂಧಿ?
(ಜೀವನ)ಲೋಪ ಸಂಧಿ.

ಕಣ್ಣೂರು ವಿ. ಗೋವಿಂದಾಚಾರಿ, ಮೈಸೂರು
ಇತ್ತೀಚಿನ ದಿನಗಳಲ್ಲಿ ನಗರಪ್ರದೇಶದ ಸುತ್ತಮುತ್ತ ಹೋಟೇಲ್‌ಗಳ, ಆಸ್ಪತ್ರೆಗಳ ಸಂಖ್ಯೆ ಹೆಚ್ಚುತ್ತಿದೆಯಲ್ಲ...?




ಸರಿಯೇ; ಇಲ್ಲಿ ತಿಂದವ ಅಲ್ಲಿ ಸೇರುವ; ಅಲ್ಲಿ ಸೇರಿದವನ ಅಟೆಂಡೆಂಟ್‌ಗಳು ಇಲ್ಲಿ ತಿನ್ನುವರು. ಪರಸ್ಪರ ಪೂರಕ!

ಬಾ.ರಂ. ಸುರೇಶ್, ಶಿವಮೊಗ್ಗ
ಹುಡುಗರು ಹುಡುಗಿಯರನ್ನು ಚುಡಾಯಿಸಿದರೆ ಹುಡುಗರಿಗೆ ಶಿಕ್ಷೆ. ಹುಡುಗಿಯರೇ ಹುಡುಗರನ್ನು ಚುಡಾಯಿಸಿದರೆ?
ಶಿಕ್ಷಣ; ಮುಂದೆ ಪತಿಗೆ ವಿಧವಿಧವಾದ ಕುಚೇಷ್ಟೆ ಮಾಡಲು ಹುಡುಗಿಯರಿಗೆ ಇದು ಪ್ರಾಕ್ಟೀಸ್ ಸೆಷನ್.

ಕೆ.ಯಂ. ವೀರೇಶ್, ಕೂಡ್ಲಿಗಿ
ಜಾರಿ ಹೋದದ್ದು ಎಂದಾದರೂ ಮರಳಿ ಬರುವುದೇ ರಾಮ್‌ಜೀ?
ಬರುತ್ತದೆ ಸೋಪು! ಕೈ ಜಾರುತ್ತಲೇ ಇರುತ್ತದೆ, ಮರಳಿ ಪಡೆಯುತ್ತಲೇ ಇರುತ್ತೇವೆ.

ಬಿ. ಚಂದ್ರೇಗೌಡ, ಬೆಂಗಳೂರು
ಬಚ್ಚಿಟ್ಟ ಪ್ರೀತಿಗೂ, ಬಿಚ್ಚಿಟ್ಟ ಪ್ರೀತಿಗೂ ಏನು ವ್ಯತ್ಯಾಸ?
ಬಚ್ಚಿಟ್ಟ ಪ್ರೀತಿಯಿಂದ ಮುಕೇಶನ ಹಾಡುಗಳಿಗೆ ಬೇಡಿಕೆ, ಬಿಚ್ಚಿಟ್ಟ ಪ್ರೀತಿಯಿಂದ ಕಿಶೋರ್ ಕುಮಾರ್ ಹಾಡುಗಳಿಗೆ.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ
ಎಲ್ಲ ಉದ್ಯೋಗಗಳು ಹೆಣ್ಣುಮಕ್ಕಳಿಗೆ ಸಿಗುತ್ತಾ ಹೋದರೆ ಗಂಡಸರ ಗತಿ ಏನು?
ಚಿಂತೆ ಬೇಡ. ಹೆಣ್ಣುಗಳೇ ಬೇಬಿ ಸಿಟ್ಟಿಂಗ್, ಡ್ರೈವಿಂಗ್, ಕುಕಿಂಗ್ ಕೆಲಸಗಳನ್ನು ಗಂಡಸರಿಗೆ ಔಟ್‌ಸೋರ್ಸ್ ಮಾಡುತ್ತಾರೆ.

ಎಂ.ಎಂ. ಗೋರಬಾಳ, ಮಾಣಿಕವಾಡಿ
ಆಸೆ ಇಲ್ಲವೆನ್ನುವ ಸ್ವಾಮೀಜಿಗಳು ಹತ್ತು ಬೆರಳಿಗೆ ಉಂಗುರ, ಕೊರಳಲ್ಲಿ ಸರ ಧರಿಸುವುದೇಕೆ?
ಚಿನ್ನದ ಡಿಸೈನ್ ನೋಡಲು ಸ್ತ್ರೀಯರು, ಸ್ತ್ರೀಯರನ್ನು ನೋಡಲು ಪುರುಷರು ಬಂದು ಆಶ್ರಮದ ಜನಪ್ರಿಯತೆ ಹೆಚ್ಚಲೆಂದಂತೆ.

ದೀಪಾ ವಿ. ಮಹಾಲೆ, ಸಾಂಬ್ರಾಣಿ
ಶ್ರಾದ್ಧ, ತಿಥಿಯಂದು ಕಾಗೆಯನ್ನು ಕೂಗಿ ಕರೆಯುವವರು ಉಳಿದ ದಿನಗಳಲ್ಲಿ ಅದನ್ನು ಓಡಿಸುವುದೇಕೆ?
ದಿನಾ ಕಾಗೆಗಿಟ್ಟರೆ ಪಿತೃಗಳಿಗೆ ಅಜೀರ್ಣವಾಗಿ ಶಪಿಸಿಯಾರೆಂಬ ಭಯ.

ಫಾಲನೇತ್ರ ಸಜ್ಜನ, ಶಿರಸಿ
ತೆರಿಗೆಗೂ, ಹೆರಿಗೆಗೂ ವ್ಯತ್ಯಾಸವೇನು?
ಎರಡೂ ಒಳಗಿನದನ್ನು ಹೊರಸೆಳೆವ ಪ್ರಕ್ರಿಯೆಯೇ ಕಾಸಿಗೊಂದು, ಕೂಸಿಗೊಂದು.

ಪಿ. ಚಿದಾನಂದ, ಜವನಗೊಂಡನಹಳ್ಳಿ
ಇಲ್ಲೊಬ್ಬ ಪತ್ನಿ ದೇವೋಭವ ಎನ್ನುತ್ತಿದ್ದಾನಲ್ಲ...?
ತಿಳಿಯಿತು; ಕಣ್ಣಿಗೆ ಕಾಣಿಸಿಕೊಳ್ಳಬೇಡ, ಕಿವಿಗೆ ಕೇಳಿಸುವಂತಿರಬೇಡ ಎಂದು ಬೇಡಿಕೊಳ್ಳುತ್ತಿದ್ದಾನೆ.

## ಬಹುಮಾನಿತ ಪ್ರಶ್ನೆ

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
ದೇಗುಲದಲ್ಲಿ ದೇವರ ಆಭರಣಗಳನ್ನು ಕದಿಯದಿರಲೆಂದು ಬೀಗ ಹಾಕುತ್ತಾರೆ. ಜಗ ಕಾಯ್ವವಗೆ ನಗ ಕಾಯಲಾಗದೆ?
ಆದೀತಾದರೂ ಜಗದ ಸಂಪತ್ತಿಗೆ ಹೋಲಿಸಿದರೆ ನಗ ನಗಣ್ಯವೆಂದು ಜಗದ್ರಕ್ಷಕ ಉಪೇಕ್ಷಿಸುವನೆಂಬ ಭಯವಂತೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು
ನಿಮ್ಮ ಮನಸ್ಸಿನಲ್ಲಿ ನೋವು ಇದೆಯಾ ಅಂತ ಕೇಳೋ ಜನರೇ ಇಲ್ಲವಲ್ಲ ಸಾರ್?
ಕೇಳಿದರೂ ನೋವು ಹಂಚಲು ನಾನೇನು ಸೀರಿಯಲ್ಲೇ? ಜಗದ ಟಾನಿಕ್ ಎಂದರೆ ನಗೆಯೊಂದೇ.

ಹೆಚ್.ಎಸ್. ಶಿವಶಂಕರ್, ಬೆಂಗಳೂರು
ಹುಡುಗಿಯರು ತಮ್ಮ ಡ್ರೆಸ್‌ಗೆ ಮ್ಯಾಚಿಂಗ್ ಆಗುವಂತಹ ಹೆಲ್ಮೆಟ್ಟನ್ನು ಕೇಳುತ್ತಿದ್ದಾರೆ. ಇದು ಸರಿಯೆ?
ಅಲ್ಲಲ್ಲಿ ಟ್ರಾಫಿಕ್‌ನವರು ಕ್ಯಾಮೆರಾ ಅಳವಡಿಸಿದ್ದಾರಲ್ಲ, ಫೋಟೋದಲ್ಲಿ ಚೆನ್ನಾಗಿ ಕಾಣಬೇಕೆಂಬ ಬಯಕೆ ತಪ್ಪೇನಲ್ಲ.

ಎಂ.ಎ. ಕುಮಾರ್, ಬೆಂಗಳೂರು
ಎಲ್ಲ ಲೋಕಗಳನ್ನು ಸುತ್ತುವ ನಾರದ



ಭೂಲೋಕಕ್ಕೆ ಬರುವುದಿಲ್ಲವೇಕೆ?
ಟ್ರಾಫಿಕ್ ಜಾಮ್‌ನಲ್ಲಿ ತಂಬೂರಿ ಜಖಂ ಆಗಿಬಿಡುವ ಭಯ.

ವಿದ್ಯಾ ಎನ್. ಪೈ, ಕಾಸರಕೋಡ
ಸಿನಿಮಾ ನಟಿಯರ ಚಿತ್ತ ರಾಜಕೀಯದತ್ತ. ಏಕೆ?
ಇಲ್ಲಿ ಹಳೆಯ ಡ್ರಮ್ಮಿನ ಬಣ್ಣ, ಆಕಾರದವರಿಗೂ ಬೇಡಿಕೆ ಇರುತ್ತದಲ್ಲ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
ರಾಮನ ಹೆಸರಿನ ನೀವು ಎಂದಾದರೂ ಮಾಯಾಮೃಗದ ಹಿಂದೆ ಹೋಗಿದ್ದೀರಾ?
ಸಾಧ್ಯವಾಗಿಲ್ಲ. ಇಂದಿನ ಮಾಯಾಮೃಗಗಳ ಹಿಂದುಮುಂದಿರುವ ಝಡ್ ಸೆಕ್ಯುರಿಟಿ.